

ಘಟ್ಟದಲ್ಲಿ ಬೂಮ್ರಾ ಯಾವ ಟೆಸ್ಟ್‌ನಲ್ಲಿ ಆಡಬೇಕು ಎನ್ನುವ ಜಿಜ್ಞಾಸೆ ಮೂಡಿದೆ.

ಭಾರತ ಕ್ರಿಕೆಟ್ ತಂಡದ ಮಾಜಿ ನಾಯಕ ದಿಲೀಪ್ ವೆಂಗ್‌ಸರ್ಕಾರ್ ಅವರ ಪ್ರಕಾರ ಯಾವ ಪಂದ್ಯವನ್ನು ಆಡಬೇಕು, ಯಾವುದರಲ್ಲಿ ಆಡಬಾರದು ಎನ್ನುವ ನಿರ್ಧಾರವನ್ನು ಬೌಲರ್‌ಗೆ ಬಿಡಬಾರದು. ಫಿಟ್ ಆಗಿದ್ದರೆ ದೇಶಕ್ಕಾಗಿ ಆಡಬೇಕು, ಅಷ್ಟೆ.

ವಿಷಯ ಇಷ್ಟು ಸರಳವಾಗಿಲ್ಲ. ಬಾರ್ಡರ್–ಗಾವಸ್ಕರ್ ಟ್ರೋಫಿ ಟೆಸ್ಟ್ ಪಂದ್ಯಗಳ ಸರಣಿ ನೆನಪಿರಬಹುದು. ಅದರಲ್ಲಿ ಆಸ್ಟ್ರೇಲಿಯಾ ಎದುರು ಐದು ಪಂದ್ಯಗಳಲ್ಲಿ ಒಟ್ಟು 32 ವಿಕೆಟ್‌ಗಳನ್ನು ಪಡೆದಿದ್ದ ಬೂಮ್ರಾ, ಕೊನೆಯ ಟೆಸ್ಟ್ ಹೊತ್ತಿಗೆ ಬೆನ್ನಿನ ಕೆಳಭಾಗದ ನೋವಿನಿಂದಾಗಿ ನಲುಗಿದ್ದರು. ಅದಾದ ನಂತರ ಅಂತರರಾಷ್ಟ್ರೀಯ ಕ್ರಿಕೆಟ್ ಪಂದ್ಯ ಆಡಲು ಅವರಿಗೆ ಸಾಧ್ಯವಾಗಿರಲಿಲ್ಲ. 2023ರ ಮಾರ್ಚ್‌ನಲ್ಲಿ ಅವರು ಬೆನ್ನಿನ ಕೆಳಭಾಗದ ನೋವು ನಿವಾರಣೆಗಾಗಿಯೇ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದರು.



ಇದೇ ವರ್ಷದ ಪ್ರಾರಂಭದಲ್ಲಿ ಬೆಂಗಳೂರಿನಲ್ಲಿರುವ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯ (ಬಿಸಿಸಿಐ) 'ಸೆಂಟರ್ ಆಫ್ ಎಕ್ಸಲೆನ್ಸ್'ನಲ್ಲಿ ತಮ್ಮ ಫಿಟ್‌ನೆಸ್ ಮರಳಿ ಪಡೆಯಲು ಬೆವರು ಹರಿಸಿದ್ದರು. ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಕ್ರಿಕೆಟ್ ಟೂರ್ನಿ ಶುರುವಾಗುವ ಕೆಲವು ದಿನಗಳ ಮುಂಚಿನ ಸಂದರ್ಭ ಅದು. 'ಸತತವಾಗಿ ಎರಡು ಟೆಸ್ಟ್‌ಗಳಿಗಿಂತ ಹೆಚ್ಚು ಆಟವನ್ನು ಇನ್ನು ಮುಂದೆ ಬೂಮ್ರಾ ಆಡಕೂಡದು. ಒಂದು ವೇಳೆ ಅವರು ಅದನ್ನು ಮೀರಿ ದಣಿದರೆ ಅವರಿಗೆ ನೋವು ಮೂಡಿದ ಜಾಗದಲ್ಲೇ ಮತ್ತೆ ಮತ್ತೆ ಸಮಸ್ಯೆ ಕಾಣಿಸಿಕೊಳ್ಳಲಿದೆ. ಇದರಿಂದ ಅವರ ಕ್ರಿಕೆಟ್ ವೃತ್ತಿಬದುಕು ಅಂತ್ಯಗೊಳ್ಳುವ ಸಾಧ್ಯತೆ ಇದೆ' ಎಂದು ಮುಂಬೈ ಇಂಡಿಯನ್ಸ್ (ಎಂಐ) ತಂಡದ ಬೌಲಿಂಗ್ ಕೋಚ್ ಶೇನ್ ಬಾಂಡ್ ಆಗ ಎಚ್ಚರಿಕೆ ನೀಡಿದ್ದರು.

ಆ ಎಚ್ಚರಿಕೆಯನ್ನೇ ಬೂಮ್ರಾ ಕಣ್ಣಿಗೊತ್ತಿಕೊಂಡಿರುವುದರಿಂದ ಅವರು ಕಾರ್ಯಭಾರ ನಿರ್ವಹಣೆಯ ತಂತ್ರಕ್ಕೆ ಕಟ್ಟುಬಿದ್ದಿದ್ದಾರೆ.

ಮೂರನೇ ಟೆಸ್ಟ್ ಪಂದ್ಯ ನಡೆಯುತ್ತಿದ್ದ ಸಂದರ್ಭದಲ್ಲಿ, 'ದಣಿವರಿಯದೆ ಬೌಲಿಂಗ್ ಮಾಡುವುದು ಸುಲಭವಲ್ಲ' ಎಂಬರ್ಥದಲ್ಲಿ ಅವರು ಪ್ರತಿಕ್ರಿಯಿಸಿದ್ದನ್ನೂ ಕಂಡೆವು. ಅವರಿಂದ ದೀರ್ಘಾವಧಿಯ ಸ್ಪೆಲ್‌ಗಳನ್ನು ಮಾಡಿಸಲು ಸಾಧ್ಯವಿಲ್ಲ. ಯಾಕೆಂದರೆ, ಬೆನ್ನಿನ ಕೆಳಭಾಗದ ಸ್ನಾಯುಗಳಿಗೆ ಹೆಚ್ಚು ಒತ್ತಡ ಹಾಕಿ ಬೌಲ್ ಮಾಡುವುದು ಅವರ ಶೈಲಿ. ಅದರ ಕಾರಣದಿಂದಾಗಿಯೇ ಅವರು ನಿಗೂಢ ವೇಗದ ಬೌಲರ್ ಎಂಬ ಖ್ಯಾತಿಯನ್ನೂ ಗಳಿಸಿರುವುದು.

ಬೂಮ್ರಾ ಅವರಿಗೀಗ 31 ವರ್ಷ ವಯಸ್ಸು. ಅವರಿಗೆ ಎಚ್ಚರಿಕೆಯ ಪಾಠ ಹೇಳಿದ ನ್ಯೂಜಿಲೆಂಡ್‌ನ ಮಾಜಿ ವೇಗದ ಬೌಲರ್ ಶೇನ್ ಬಾಂಡ್ ಅವರೂ 29ನೇ ವಯಸ್ಸಿನಿಂದಲೇ ನೋವಿನಿಂದ ನಲುಗಿದ್ದವರು. ವಯಸ್ಸು 34 ದಾಟುವ ಮೊದಲೇ ಅವರು ಕ್ರಿಕೆಟ್‌ನಿಂದ ನಿವೃತ್ತಿ ಪಡೆದುಕೊಂಡರು. ಸ್ವಾನುಭವದಿಂದ ಭಾರತದ ಬೌಲರ್‌ಗೆ ಅವರು ಎಚ್ಚರಿಕೆ ನೀಡಿರುವುದರಿಂದ ಅದನ್ನು ಉಪೇಕ್ಷಿಸಲಾಗದು.

ಬೂಮ್ರಾ ಇಂಗ್ಲೆಂಡ್ ನೆಲದಲ್ಲಿ ಬೆವರು ಬಸಿಯುತ್ತಿರುವ ಹೊತ್ತಿನಲ್ಲಿ ಅದೇ ದೇಶದಲ್ಲಿ ವಿಂಬಲ್ಡನ್ ಗ್ರ್ಯಾನ್ ಸ್ಲ್ಯಾಮ್ ಟೆನಿಸ್ ಟೂರ್ನಿ ನಡೆಯಿತು. ಪುರುಷರ ಸಿಂಗಲ್ಸ್‌ನ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಇಟಲಿಯ ಫ್ಲಾವಿಯೊ ಕೊಬೊಲಿ ವಿರುದ್ಧ ಆಡುತ್ತಿದ್ದಾಗ ಮ್ಯಾಚ್ ಪಾಯಿಂಟ್‌ಗೆ ಒಂದು ಹೆಜ್ಜೆ ದೂರ ಇರುವಾಗ ಸರ್ಬಿಯಾದ ನೊವಾಕ್ ಜೊಕೊವಿಚ್ ಜಾರಿದರು. ಎರಡು ಕಾಲುಗಳೂ ದಿಢೀರನೆ ಅಗಲಗೊಂಡು, ಅವರು ನೆಲಕ್ಕೆ ಉರುಳಿದರು. ಅವರಿಗೆ ಆಗ ಆಗಿರಬಹುದಾದ ನೋವು ಎಂಥದ್ದು ಎನ್ನುವುದು ಅಲ್ಲಿದ್ದ ಬಹುತೇಕರಿಗೆ ಗೊತ್ತಿತ್ತು. ಮತ್ತೆ ಸಾವರಿಸಿಕೊಂಡು ಎದ್ದು ನಿಂತು ಆಡಿ, ಅವರು ಪಂದ್ಯವನ್ನು ತಮ್ಮದಾಗಿಸಿಕೊಂಡರು.

ಅದಕ್ಕೂ ಮೊದಲು ಆಸ್ಟ್ರೇಲಿಯಾದ ಅಲೆಕ್ಸ್ ಡಿ ಮಿನೌರ್ ಎದುರಿನ ನಾಲ್ಕನೇ ಸುತ್ತಿನ ಪಂದ್ಯದಲ್ಲಿ ಅವರು ಪದೇ ಪದೇ ಜೋರಾಗಿ ಉಸಿರು ಹೊರಗೆ ಹಾಕುತ್ತಾ ಆಡಿದ್ದರು. 26 ವರ್ಷದ ಹುಡುಗನ ಚುರುಕು ಪಾದಗಳ ಎದುರು 38 ವರ್ಷದ ತಾವು ಸೆಣಸುವುದು ಸಲೀಸಾಗಿರಲಿಲ್ಲ ಎಂದು ಪಂದ್ಯದ ನಂತರ ಜೊಕೊವಿಚ್ ಭಾವುಕರಾಗಿ ನುಡಿದರು.

ತಾವು ನಿವೃತ್ತಿಯನ್ನು ಇನ್ನೂ ಘೋಷಿಸಿಲ್ಲವಾದರೂ 22 ವರ್ಷದ ಕಾರ್ಲೋಸ್ ಅಲ್ಕರಾಜ್ ಅವರಂತಹ ಹುಡುಗರ ಎದುರು ಆಡುವುದು ತಮಾಷೆ ಮಾತಲ್ಲ. ತಾನು ಹುಟ್ಟಿಯೇ ಇಲ್ಲದಿದ್ದಾಗಿನಿಂದ ಆಡುತ್ತಾ ಬಂದಿರುವ ದಿಗ್ಗಜ ಜೊಕೊವಿಚ್ ಜೊತೆ ಆಟವಾಡುವ ಸುಖ ಎಂಥದ್ದೆಂದು ಹೇಳಿಕೊಂಡಿದ್ದರು.

ಬೂಮ್ರಾ, ಜೊಕೊವಿಚ್ ಇಬ್ಬರೂ ತಮ್ಮ ನೋವುಗಳಿಗೆ ಶ್ರಮ–ಸಾರ್ಥಕ್ಯದ ಮುಲಾಮು ಸವರುತ್ತಾ ನಿಂತಿದ್ದಾರೆ; ಮತ್ತೊಂದು ಸವಾಲಿಗೆ ಎದೆಗೊಡುತ್ತಾ. ■

